**ದಿನಾಂಕಃ 13.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಿಪಿ 19 ಮತ್ತು 20 ಅನ್ನು ಎದುರುದಾರರ ಪರ ವಕೀಲರಾದ ನೀವು ಕೇಳಿದ ಮೇರೆಗೆ ಹಾಜರುಪಡಿಸಿದ್ದು, ನನ್ನ ಪ್ರತ್ಯೇಕ ಉದ್ದೇಶ ಇರುವುದಿಲ್ಲ. ಅರ್ಜಿಯ ಶಿರೋನಾಮೆಯಲ್ಲಿ ಮುನಿವೆಂಕಟಪ್ಪರವರನ್ನು ಪ್ರತಿನಿಧಿಸಿರುವ ವ್ಯಕ್ತಿ ನಾನೇ ಆಗಿರುತ್ತೇನೆ. ನಾನು ಮುನಿವೆಂಕಟಪ್ಪರವರ ಜನಿತ ಮಗ ಅಲ್ಲ ಎಂದರೆ ಸರಿ. ನಿಪಿ 20 ರಲ್ಲಿ ಇರುವ ಪ್ರವಿಣ್ ಕುಮಾರ್ ಎಂಬ ವ್ಯಕ್ತಿ ನಾನು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಖಾತೆ ತೆರೆಯುವ ಸಂದರ್ಭದಲ್ಲಿ ನೀಡಲಾದ ದಾಖಲಾತಿ ಮತ್ತು ಫೋಟೆವನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ವಿಚಾರಣೆಯಲ್ಲಿ ಉಂಟಾದಂತಹ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವ ಉದ್ದೇಶದಿಂದ ನಿಪಿ 19 ಮತ್ತು 20 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಮುನಿವೆಂಕಟಪ್ಪ ಜೀವಂತವಾಗಿದ್ದರು ಎಂದರೆ ಸರಿ. ಅರ್ಜಿ ಸಲ್ಲಿಸಿದ ಎರಡು ವರ್ಷಗಳ ನಂತರ ಮುನಿವೆಂಕಟಪ್ಪ ರವರು ಮೃತಪಟ್ಟಿರುತ್ತಾರೆ. ಉದ್ದೇಶಪೂರ್ವಕವಾಗಿ ಅವರು ನ್ಯಾಯಾಲಯಕ್ಕೆ ಬರದಂತೆ ನಾನು ತಡೆಹಿಡಿದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಹಾಸಿಗೆ ಹಿಡಿದಿದ್ದ ಕಾರಣ ಬರಲು ಆಗಿರಲಿಲ್ಲ ಎಂದು ನುಡಿಯುತ್ತಾರೆ. ಮುನಿವೆಂಕಟಪ್ಪ ಮೃತಪಟ್ಟ ನಂತರ ಕೇವಲ ಪರಿಹಾರ ಪಡೆಯುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮುನಿವೆಂಕಟಪ್ಪರವರಿಗೆ ಯಾರೂ ಅವಲಂಬಿತರು ಇರಲಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**